2. ಸೌಂದತ್ತಿಯ ಬಳಿ ತನಿಕೊಳದಲ್ಲಿ ರೂ. 19.15 ಲಕ್ಷಗಳ ಅಂದಾಜಿನಲ್ಲಿ ಹೆದ್ದಾರಿ ಸೌಲಭ್ಯದ ನಿರ್ಮಾಣ ಇದರಲ್ಲಿ ಕೇಂದ್ರದ ಪಾಲು ರೂ. 17.20ಲಕ್ಷಗಳಾಗಿರುತ್ತವೆ. ಈ ಯೋಜನೆ ಕಾರ್ಯ ಕೆ.ಎಲ್. ಎ.ಸಿ ಸಂಸ್ಥೆಗೆ ವಹಿಸಲಾಗಿದೆ. ಶೀಘ್ರದಲ್ಲೇ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುತ್ತದೆ.

3. ರಾಜ್ಯ ಸರ್ಕಾರದ ನೆರವಿನಿಂದ ಪ್ರಶ್ನೆ (ಅ)ದ ಉತ್ತರದಲ್ಲಿ ನಮೂದಿಸಿರುವ 14 ಕೆಲಸ.

ಈ)

ಅ) ತೆನಿಕೊಳದಲ್ಲಿ ಹೊನಲು ಬೆಳಕಿನ ಸೌಲಭ್ಯದ ಯೋಜನೆಗೆ ಕೇಂದ್ರ ಸರ್ಕಾರ ಮಂಜೂರು ಮಾಡಿರುವುದಿಲ್ಲ.

ಆ) ಕೇಂದ್ರ ಸರ್ಕಾರವು ತೆನಿಕೊಳದಲ್ಲಿ ಹೆದ್ದಾರಿ ಸೌಲಭ್ಯದ ನಿರ್ಮಾಣಕ್ಕಾಗಿ ರೂ. 17.20ಲಕ್ಷಗಳನ್ನು ಮಂಜೂರು ಮಾಡಿರುತ್ತದೆ. ಈ ಯೋಜನೆ ಕಾರ್ಯ ಕೆ.ಎಲ್.ಎ.ಸಿ. ಸಂಸ್ಥೆಗೆ ವಹಿಸಲಾಗಿದೆ.

ಉ) ಕೇಂದ್ರ ಸರ್ಕಾರ ರೂ. 5.16 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತದೆ. ಕಾಮಗಾರಿ ಕಾರ್ಯವನ್ನು ಪ್ರಾರಂಭಿಸಬೇಕಿರುತ್ತದೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಜಿಲ್ಲಾ ಪರಿಷತ್‌ಗೆ ನಬಾರ್ಡ್ ಯೋಜನೆಗೆ ಸೇರಿದ ರಸ್ತೆಗಳು

2278 -ಶ್ರೀ ಮಹಾಂತೇಶ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಜಿಲ್ಲಾ ಪರಿಷತ್‌ಗೆ ಸೇರಿದ ಚಚಡಿ, ಹಿರೇಬಿದನೂರ, ಓಬಲದಿನ್ನಿ ಮಳಗಲಿ, ತಡಸಲೂರ ರಸ್ತೆಯನ್ನು ನಬಾರ್ಡ್ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲು ಮನವಿಗಳು ಏನಾದಲೂ ಸರ್ಕಾರಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆಯು ರೈತರಿಗೆ ಮುಖ್ಯವಾದ ಜಿಲ್ಲಾ ಪರಿಷತ್‌ಗೆ ಸೇರಿದ ರಸ್ತೆಯಿದ್ದು ಇವುಗಳನ್ನು ನಬಾರ್ಡ್ ಯೋಜನೆಯಲ್ಲಿ ತೆಗೆದುಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಇ) ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ವೆಚ್ಚ ಎಷ್ಟು ಹಾಗೂ ಎಷ್ಟು ಕಿ.ಮೀ. ರಸ್ತೆಯನ್ನು ಸರ್ವಋತು ರಸ್ತೆಯನ್ನಾಗಿ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕ್ರೀಡಾಪಟುಗಳಿಗೆ ಹಣದ ವ್ಯವಸ್ಥೆ

2281 - ಶ್ರೀ ಟಿ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತಾಲ್ಲೂಕು ಮಟ್ಟದ ಕ್ರೀಡೆಗಳಲ್ಲಿ ಮೊದಲು ಬಂದು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗುತ್ತಿರುವ ಕ್ರೀಡಾಪಟುಗಳಿಗೆ ಅಲ್ಲಿಗಳಿಗೆ ಹೋಗಿ ಬರಲು ಹಣದ ಅಡಚಣೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಇದನ್ನು ಸರಿಪಡಿಸಿ ಆ ಮಕ್ಕಳಿಗೆ ಬೇಕಾದ ಹಣದ ವ್ಯವಸ್ಥೆ ಮಾಡಲು ಕ್ರಮ ಜರುಗಿಸಲಾಗುವುದೇ ಈ ಬಗ್ಗೆ ಸರ್ಕಾರ ಮಾಡಿರುವ ತೀರ್ಮಾನಗಳೇನಾದರೂ ಇದೆಯೇ? ಹಾಗಿದ್ದಲ್ಲಿ ಅಂತಹ ತೀರ್ಮಾನಗಳಾವುವು?

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು) :

1. ಹೌದು.

2. ಈ ಕುರಿತು ಮುಂದಿನ ವರ್ಷದ ಆಯವ್ಯಯದಲ್ಲಿ ಹೆಚ್ಚಿಗೆ ಹಣವನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

ನಾಟಕಕಾರ ಮಲ್ಲಪ್ಪನವರ ಸ್ಮರಣಾರ್ಥ ಕಾರ್ಯಕ್ರಮ

2282 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿಯಲ್ಲಿ ಹುಟ್ಟಿ ಬೆಳೆದ ನಾಟಕಕಾರ ಮಲ್ಲಪ್ಪನವರ ಸ್ಮರಣಾರ್ಥ ಏನಾದರೂ ಕಾರ್ಯಕ್ರಮ ಜರುಗಿಸಲಾಗುವುದೆ. ಹಾಗಿದ್ದಲ್ಲಿ ಕನಿಷ್ಟ ಅವರ ಹೆಸರನ್ನು ಬೆಂಗಳೂರಿನಲ್ಲಿ ಎಲ್ಲಾದರೂ ಜ್ಞಾಪಿಸಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯ ಹಾಗೂ ಕನ್ನಡ ಮತ್ತ ಸಂಸ್ಕೃತಿ ರಾಜ್ಯ ಸಚಿವೆಯರು) :

ಅ) ಸರ್ಕಾರದಲ್ಲಿ ಇದರ ಬಗ್ಗೆ ಈವರೆಗೂ ಯಾವ ಪ್ರಸ್ತಾವನೆ ಇರುವುದಿಲ್ಲ. ಮನವಿ ಬಂದರೆ ಇದನ್ನು ಪರಿಶೀಲಿಸಲಾಗುವುದು.